ಮರೆತು ತಮ್ಮದೇ ಜೈವಿಕ ಲಕ್ಷಣಗಳನ್ನು ವಿಸ್ತರಿಸಿಕೊಂಡ ಮಕ್ಕಳಿಂದ ಐನ್‌ಸ್ಟೀನ್, ಸರ್ ಎಂ.ವಿ., ಶ್ರೀನಿವಾಸ ರಾಮಾನುಜನ್‌ರಂತಹ ಅಸಾಧಾರಣ ಪ್ರತಿಭೆಗಳನ್ನು ನಿರೀಕ್ಷಿಸುತ್ತಿದ್ದುದು ನಮಗೆ ಸರ್ವಥಾ ಸಮ್ಮತವಿರಲಿಲ್ಲ. ಶಾಲೆಯಲ್ಲಿ ಶಿಕ್ಷಕರು ಕೋಪದಿಂದ ಬೈದಾಗಲೋ, ಬೆತ್ತದಿಂದ ಬಾರಿಸಿದಾಗಲೋ, ತರಗತಿಯ ಮುಖ್ಯ ದ್ವಾರದಿಂದ ಹೊರಗಟ್ಟಿದಾಗಲೋ ನಟ ದ್ವಾರಕೀಶ್ ನಮ್ಮೆದುರು ಧುತ್ತನೆ ಪ್ರತ್ಯಕ್ಷವಾಗಿ ‘ಗುರುಗಳು ಹೇಳುವ ಮಾತುಗಳೆಲ್ಲಾ ಎಂದೂ ನಿಜವಲ್ಲ ಗೆಳೆಯ ಎಂದೂ ನಿಜವಲ್ಲ...’ ಎಂದು ಕೈಯಾಡಿಸುವಾಗ ನೊಂದ ಮಕ್ಕಳ ಮನಕ್ಕೆ ಇದು ತಂಪೆರೆಯುವ ನ್ಯಾಷನಲ್ ಆಂಥೆಮ್‌ನಂತಾಗಿತ್ತು.

ಹಾಡಿನ ಸಾಹಿತ್ಯ ನಮಗೆ ಆ ಕ್ಷಣದಲ್ಲಿ ಖುಷಿ ನೀಡಿದರೂ ಅಂದು ದೊಡ್ಡವರನ್ನು ದಡ್ಡರೆಂದು ಪ್ರೂವ್ ಮಾಡುವುದು ಅಷ್ಟು ಸುಲಭವಿರಲಿಲ್ಲ. ನಾವು ಬೆಳೆದು ದೊಡ್ಡವರಾಗುವವರೆಗೂ ನಮ್ಮ ಶಿಕ್ಷಕರು ಹಾಗೂ ಪೋಷಕರಿಗೆ ತಿಳಿಯದ ವಿಷಯವೇ ಈ ಜಗತ್ತಿನಲ್ಲಿಲ್ಲವೆಂಬ ಭ್ರಮೆಯಲ್ಲಿದ್ದೆವು. ಅವರ ಪದ್ಧತಿ, ಸಂಪ್ರದಾಯ, ಆಚರಣೆ, ಅಭ್ಯಾಸಗಳನ್ನು ನಮ್ಮ ಮೇಲೆ ಹೇರುವಾಗ ಅದರ ಹಿಂದಿನ ಅರ್ಥ, ಕಾರಣಗಳೇನೆಂದು ಪ್ರಶ್ನಿಸುವ ಹಕ್ಕಾಗಲೀ, ಧೈರ್ಯವಾಗಲೀ ಚಿಕ್ಕವರಿಗೆ ಇರಲಿಲ್ಲ. ಇದರಿಂದ ಕಿರಿಯರ ಜ್ಞಾನ ವಿಸ್ತರಣೆಯಾಗದೆ ತಲೆಯಲ್ಲಿ ಆಗಾಗ ಓಡುತ್ತಿದ್ದ ಅಸಾಧಾರಣ ಐಡಿಯಾಗಳು ಅನಾವರಣಗೊಳ್ಳದೆ ಅರಳುವ ಮುನ್ನವೇ ಮುದುಡುತ್ತಿದ್ದವು. ಆ ಸತ್ಯವನ್ನು ಕಂಡುಕೊಂಡ ಕೆಲವು ಲೇಖಕರು ಅದನ್ನು ಅಚ್ಚುಕಟ್ಟಾಗಿ ದಾಖಲಿಸಿರುವರು. ರವೀಂದ್ರನಾಥ ಠಾಗೂರರು **‘Children should not be limited by your own learning as they are born in a different time and have their unique potential’** ಎಂದರೆ ಇದಕ್ಕಿಂತಲೂ ಒಂದು ಹೆಜ್ಜೆ ಮುಂದಿರಿಸಿದ ಬೀಚಿಯವರು–

ನಿನ್ನಂತೆ ನೀನಾಗು ನಿನ್ನ ನೀ ಅರಿ
ಮೊದಲು ಚೆನ್ನೆಂದು ದೊಡ್ಡವರ
ಅನುಕರಿಸಬೇಡ
ಏನಾಯ್ತು ಮರಿಕತ್ತೆ? ಚೆಲುವಿತ್ತು ಮುದ್ದಿತ್ತು
ತನ್ನಪ್ಪನಂತಾಗಿ ಹಾಳಾಯ್ತೊ ತಿಂಮ

ಎಂದರು. ಕಾಲ ಬದಲಾಗಿ ಇಂಟರ್ನೆಟ್ ಯುಗ ಶುರುವಾದಂತೆ ಹೊಸದಕ್ಕೆ ಒಗ್ಗಿಕೊಳ್ಳಲು ಬಯಸದ ದೊಡ್ಡವರು ಮಕ್ಕಳ ಮುಂದೆ ಚಿಕ್ಕವರಾಗತೊಡಗಿದರು. ಲೀಲಾಜಾಲವಾಗಿ ಮೊಬೈಲ್, ಲ್ಯಾಪ್‌ಟಾಪ್ ಕೀಬೋರ್ಡ್ ಮೇಲೆ ಮಕ್ಕಳು ಬೆರಳಾಡಿಸುತ್ತಿದ್ದರೆ ಮಳೆ ನಿಂತ ಮೇಲೆ ತೊಟ್ಟಿಕ್ಕುವ ಮರದ ಹನಿಯಂತೆ ಹಿರಿಯರು ಆಗೊಂದು ಈಗೊಂದು ಕೀಲಿಯನ್ನು ತೋರ್ಬೆರಳಿನಿಂದ ಅಮುಕಿ ಮೆಸೇಜ್ ಟೈಪಿಸುವಷ್ಟರಲ್ಲಿ ಮೊಬೈಲೇ ಆಕಳಿಸಿ, ತೂಕಡಿಸಿ ಅದರ ಬೆಳಕು ಆರುವ ಹಂತ ತಲುಪುತ್ತಿತ್ತು. ಇಂದಿಗೂ ಬ್ಯಾಂಕ್‌ಗಳಲ್ಲಿ ಪೇ ಇನ್ ಸ್ಲಿಪ್, ಚೆಕ್‌ಬುಕ್, ಪಾಸ್‌ಬುಕ್ ಹಿಡಿದು ಕ್ಯೂನಲ್ಲಿ ನಿಲ್ಲುವವರೆಲ್ಲಾ ದೊಡ್ಡವರೇ. ನೆಟ್ ಬ್ಯಾಂಕಿಂಗ್, ಗೂಗಲ್ ಪೇ, ಫೋನ್ ಪೇಗಳೆಲ್ಲಾ ಅವರಿಗೆ ಆಗಿಬರದು. ಕೊತ್ತಂಬರಿ ಕೊಂಡರೂ ಕೋಡ್ ಸ್ಕ್ಯಾನ್ ಮಾಡುವ ಜಮಾನಾದಲ್ಲಿ ನೋಟಿಗಾಗಿ ಕೋಟಿನ ಜೇಬು ತಡಕಾಡುವ ಹಿರಿಯರು ಇಂದಿನ ಟೆಕ್ ಫ್ರೆಂಡ್ಲಿ ಕೂಸುಗಳೆದುರು ಆಡ್ ಮ್ಯಾನ್ ಔಟ್‌ಗಳು. ಹೊಸ ಸ್ಮಾರ್ಟ್‌ಫೋನಿನ ವಿವಿಧ ಆ್ಯಪ್‌ಗಳನ್ನು ಒಗ್ಗಿಸಿಕೊಳ್ಳುವಷ್ಟರಲ್ಲಿ ಅವರ ತಾಳ್ಮೆ ಆಫ್ ಆಗುವುದು. ಮಕ್ಕಳು ಕಲಿಸಿದ್ದು ತಲೆಗೆ ನಾಟದೆ ತಮ್ಮ ಗ್ರಹಿಕೆಯ ಗಡಿಯನ್ನು ವಿಸ್ತರಿಸಿಕೊಳ್ಳಲಾಗದೆ ಮೊಮ್ಮಕ್ಕಳ ಬಳಿ ಸಾಗಿದರೆ ಅವು ಸ್ಕ್ರೀನ್ ಮೇಲೆ ಪಟಪಟನೆ ಥಂಬ್ ಆಡಿಸಿ ಚಕಚಕನೆ ವಿವರಿಸುವಾಗ ಡಂಬ್ ಆಗುವ ಸರದಿ ದೊಡ್ಡವರದು.

ತಾಯ ಗರ್ಭದಲ್ಲಿ ಚಕ್ರವ್ಯೂಹದ ಪಾಠ ಕಲಿತ ಅಭಿಮನ್ಯುವಿನಂತೆ ಇಂದಿನ ಮಕ್ಕಳಿಗೆ ಇಂತಹ ವಿದ್ಯೆಗಳೆಲ್ಲಾ ಗರ್ಭಗತವಾಗಿರುತ್ತವೆ. ಅವು ಸೋಷಿಯಲ್ ಮೀಡಿಯಾದಲ್ಲಿ ಸ್ಟೇಟಸ್ ಹಾಕಿಕೊಂಡೇ ಈ ಲೋಕಕ್ಕೆ ಅಡಿಯಿರಿಸುತ್ತವೆ. ಕಲಿಸಿದ್ದನ್ನು ಅರ್ಧ ಕೇಳಿಸಿಕೊಂಡು, ಕಾಲು ಭಾಗ ಅರ್ಥೈಸಿಕೊಂಡು ಮುಕ್ಕಾಲು ಭಾಗ ಮರೆಯುವ ದೊಡ್ಡವರು ಆನ್‌ಲೈನ್ ಶಾಪಿಂಗ್ ಮಾಡಿ ಆಗಾಗ ಯಾಮಾರುವುದು, ಒಟಿಪಿ ಹೇಳಿ ತಲೆಗೆ ತಂದುಕೊಳ್ಳುವುದೇ ಹೆಚ್ಚು.

ಪುರಾಣ ಕಾಲದಿಂದಲೂ ದೊಡ್ಡವರ ದಡ್ಡತನವನ್ನು ಸಾಬೀತುಪಡಿಸುವ ಹಲವು ಪ್ರಸಂಗಗಳಿವೆ. ಬಾಲಕ ಪ್ರಹ್ಲಾದ ‘ಎಲ್ಲೆಲ್ಲೂ ಇರುವನು ಹರಿ’ ಎಂದು ಹಲವು ಬಾರಿ ಗಂಟಲು ಹರಿದುಕೊಂಡರೂ ನಂಬದ ಹಿರಣ್ಯ ಕಶಿಪು ‘ನಿನ್ನ ಹರಿ ಈ ಕಂಬದಲ್ಲಿರುವನೇ? ಆ ಕಂಬದಲ್ಲಿರುವನೇ?’ ಎನ್ನುತ್ತಾ ಎಲ್ಲಾ ಕಂಬವನ್ನೂ ಸುತ್ತುವಾಗ ಕಂಬದಿಂದಲೇ ಹೊರಬಂದ ಹರಿ ಉಗ್ರ ನರಸಿಂಹನಾಗಿ ಅವನ ಒಡಲನ್ನು ಹರಿದದ್ದು ದೊಡ್ಡವರ ದಡ್ಡತನಕ್ಕೆ ಹಿಡಿದ ಕನ್ನಡಿ. ಆರು ವರ್ಷದ ಬಾಲಕ ಧ್ರುವ ತಂದೆ ಉತ್ತಾನಪಾದನ ತೊಡೆಯ ಮೇಲೆ ಕುಳಿತುಕೊಳ್ಳಲು ಹೋದ ಸಮಯ ಆದ ಅವಮಾನದಿಂದ ದೃಢಸಂಕಲ್ಪ ಮಾಡಿ ನಾರಾಯಣನ ಮನ ಗೆದ್ದು ಉತ್ತರ ಧ್ರುವದ ಸಪ್ತರ್ಷಿಮಂಡಲದಿ ನಕ್ಷತ್ರವಾಗಿ ನೆಲೆಸಿ ಇಂದಿಗೂ ‘ಫಸ್ಟ್ ಎವರ್ ಕಾನ್‌ಸ್ಟೆಂಟ್ ಕಾಂಪಾಸ್’ ಆಗಿ ಮಿನುಗುತ್ತಿರುವನು. ದೊಡ್ಡವರ ದಡ್ಡತನದೆದುರು ಚಿಕ್ಕವರು ತಾರಾಪಟ್ಟಕ್ಕೇರಿದ್ದಕ್ಕೆ ನಿದರ್ಶನವಿದು.

ತನ್ನ ತಂದೆ ಯಜ್ಞದಲ್ಲಿ ಮುದಿಗೋವುಗಳನ್ನು ದಕ್ಷಿಣೆಯಾಗಿ ನೀಡಿದ್ದನ್ನು ಪ್ರಶ್ನಿಸಿದ ಬಾಲಕ ನಚಿಕೇತ ಅವರ ಕೋಪಕ್ಕೆ ಗುರಿಯಾಗಿ ಯಮನ ಬಳಿಗೆ ಹೋಗಿ ಬ್ರಹ್ಮ ಜ್ಞಾನವನ್ನು ಪಡೆದು ಸಾವಿನ ವ್ಯಾಖ್ಯಾನವನ್ನು ಪ್ರಪಂಚಕ್ಕೇ ಹಂಚಿದ. ಮಹಾಜ್ಞಾನಿ ಮಾರ್ಕಂಡೇಯ ಅಲ್ಪಾಯುವಾದರೂ ತನ್ನ ಹದಿನಾರನೇ ವಯಸ್ಸಿನಲ್ಲಿ ಮೃತ್ಯುಂಜಯ ಮಂತ್ರದ ಶಕ್ತಿಯಿಂದ ಯಮನನ್ನು ಸೋಲಿಸಿ, ಚಿರಂಜೀವಿಯಾಗುವನು. ಹೀಗೆ ದೊಡ್ಡವರ ನಡುವೆಯೇ ಕಿರಿಯರು ಹಿರಿದಾದ ಸಾಧನೆ ಮಾಡಿಹರು.

ಗಾತ್ರಕ್ಕಿಂತಲೂ ಪಾತ್ರ ಮುಖ್ಯ ಎಂಬಂತೆ ದೊಡ್ಡ ಗಾತ್ರದ ಬೋಂಡ ಬಜ್ಜಿಯ ಮೆಣಸಿನಕಾಯಿಗಿಂತ ಚಿಕ್ಕ ಚುರುಕು ಮೆಣಸಿನಕಾಯಿಗಳು ಹೆಚ್ಚು ತೀಕ್ಷ್ಣ. ಇಂದಿಗೂ ಮನೆಯ ಹಿರಿ ಮಕ್ಕಳಿಗಿಂತಲೂ ಕಿರಿಯ ಕೂಸುಗಳು ಹೆಚ್ಚು ಶಾಣ್ಯಾ ಆಗಿರುವುದನ್ನು ಕಾಣಬಹುದು. ದೊಡ್ಡವ ಗಣೇಶ ಕಾರ್ತಿಕೇಯನೊಂದಿಗೆ ವಿಶ್ವ ಸುತ್ತುವ ಸ್ಪರ್ಧೆಯಲ್ಲಿ ತನ್ನ ತಂದೆತಾಯಿಯರನ್ನೇ ಮೂರು ಸುತ್ತು ಸುತ್ತಿ ಬುದ್ಧಿವಂತನೆಂದು ಪ್ರೂವ್ ಮಾಡಿದನೆಂಬ ಮಾತಿದೆ. ಆದರೆ ನಿಜವಾದ ಬುದ್ಧಿವಂತ ಕಾರ್ತಿಕೇಯ. ಅವನು ಮೈಕೊಡವಿ ಮೇಲೆದ್ದು ಇಡೀ ವಿಶ್ವವನ್ನು ಮೂರು ಬಾರಿ ಸುತ್ತಿ ಬೆವರು ಹರಿಸಿದ್ದರಿಂದ ಅವನ ದೇಹ ಸ್ಲಿಮ್ ಅಂಡ್ ಟ್ರಿಮ್ ಆಯಿತು. ಗಣಪ ಸೋಮಾರಿತದಿಂದ ಸುಲಭ ಮಾರ್ಗ ಕಂಡುಕೊಂಡು ಸುಮೋ ದೇಹದ ಒಡೆಯನಾದ. ನಂತರವೂ ಕೂಡ ಆ ದೇಹಕ್ಕೆ ಸರಿಸಮವಾಗಿ ಆನೆಯನ್ನೋ, ಒಂಟೆಯನ್ನೋ ವಾಹನವನ್ನಾಗಿ ಹೊಂದದೆ ಮೂಷಿಕನನ್ನಿರಿಸಿಕೊಂಡು ಆಗಾಗ ಆಯತಪ್ಪಿ ಮಗುಚಿಕೊಂಡದ್ದು ಅವನ ದಡ್ಡತನಕ್ಕೆ ಸಾಕ್ಷಿ.

ವಿಲಿಯಂ ವರ್ಡ್ಸ್‌ವರ್ಥ್ ‘ಮೈ ಹಾರ್ಟ್ ಲೀಪ್ಸ್ ಅಪ್’ ಪದ್ಯದಲ್ಲಿ ‘ಚೈಲ್ಡ್ ಈಸ್ ಫಾದರ್ ಆಫ್ ದ ಮ್ಯಾನ್’ ಎನ್ನುತ್ತಾ ಚಿಕ್ಕಂದಿನ ಅನುಭವ ಭವಿಷ್ಯದ ಮೇಲೆ ಬೀರುವ ಪ್ರಭಾವದ ಬಗ್ಗೆ ತಿಳಿಸಿದರೆ ಕುವೆಂಪು ಅವರು ತೇಜಸ್ವಿಯನ್ನು ಕುರಿತು ‘ನೀನು ಎರಡು ವರ್ಷದ ಕಂದ ನಾನು ಎರಡೇ ವರ್ಷದ ತಂದೆ ಹಾಗೆ ನೋಡಿದರೆ ನಾವಿಬ್ಬರೂ ಒಂದೇ’ ಎಂದಿರುವರು. ಅಂದೇ ಚಿಕ್ಕವರ ಮೇಲೆ ಅಭಿಮಾನ ತೋರಿ ದೊಡ್ಡತನ ಮೆರೆದವರಿವರು.

ದೊಡ್ಡ ದೇಹದ ಆನೆ, ಸಿಂಹಗಳನ್ನು ಪುಟ್ಟ ದೇಹದ ನರಿ, ಇಲಿ, ಇರುವೆಗಳು ಮಣಿಸಿದ ಕತೆಗಳು ನಮ್ಮಲ್ಲಿ ದಂಡಿಯಾಗಿವೆ. ಗುಣಕ್ಕೂ, ಜ್ಞಾನಕ್ಕೂ ವಯಸ್ಸಿಗೂ, ಆಕಾರಕ್ಕೂ ನೇರ ಸಂಬಂಧವಿರುವುದಿಲ್ಲ. ಕಿರಿಯರು ಆಗಾಗ ಸ್ವಲ್ಪ ಕಿರಿಕಿರಿ ಮಾಡಿದರೂ ಹಿರಿದಾದದ್ದನ್ನೂ ಮಾಡಿ ತೋರಿಸಬಲ್ಲರು. ಹಿರಿಯರ ಅನುಭವ, ಕಿರಿಯರ ನವೀನ ದೃಷ್ಟಿಕೋನಗಳು ಸಂಗಮಿಸಿದರೆ ‘ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು’ ಎಂಬಂತೆ ಪ್ರಗತಿಯೆಡೆಗೆ ದಾರಿಯಾಗುವುದು.

ಪ್ರತಿಕ್ರಿಯಿಸಿ: **feedback@sudha.co.in**



